ಓ.ಎಸ್. ನಂಃ 16/2021 ಡಿ.ಡಬ್ಲ್ಯೂ (1) /ಪ್ರತಿವಾದಿ ನಂ. 3

**ದಿನಾಂಕಃ 09-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ ಸಿ.ಎಸ್.ಕೆ. ವಕೀಲರಿಂದಃ

ದಾವೆಯಲ್ಲಿ ಹಾಜರುಪಡಿಸಿದ ನಮ್ಮ ಮತ್ತು ವಾದಿಯರ ದಾಖಲಾತಿ ನೋಡಿದ್ದೇನೆ. ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದ ವಿಷಯಗಳು ಗೊತ್ತಿದೆ.

2. ನಾನು ಪ್ಲಾಟ್ ನಂ. 41 ನ್ನು ಪ್ರತಿವಾದಿ ನಂ. 2 ಅಶೋಕ ಕಡೆಯಿಂದ ದಿಃ- 07-07-2010 ರಂದು ಖರೀದಿಸಿದ್ದೇನೆ ಎಂದರೆ ಸರಿ. ನಾನು 2000 ರಿಂದ 2010 ನೇ ಸಾಲಿನ ಪ್ಲಾಟ್ ನಂ. 41 ಕ್ಕೆ ಸಂಬಂದಪಟ್ಟ ಎನಕಬರೆನ್ಸ ಸರ್ಟಿಫಿಕೇಟ್, property extract, ನೋಡಿ ಪ್ರತಿವಾದಿ ನಂ. 2 ಅಶೋಕನ ಹೆಸರಲ್ಲಿ ಪ್ಲಾಟ್ 41 ಇದ್ದದ್ದನ್ನು ಖಾತರಿಪಡಿಸಿಕೊಂಡು ನಾನು ಖರೀದಿಸಿದ್ದೇನೆ. ಆಗ ವಾದಿ ಅಕ್ಕಮಹಾದೇವಿ ಹಿರೇಮಠ ಹೆಸರು ಆ ಎನಕಬರನ್ಸೆ ಸರ್ಟಿಫಿಕೇಟ್ ನಲ್ಲಿ ಅಥವಾ ಪ್ರಾಪರ್ಟಿ ಎಕ್ಸಾಟಾಕ್ಟ ನಲ್ಲಿ ಇರಲಿಲ್ಲ . 2000 ರಿಂದ 2010 ನೇ ಸಾಲಿನ ಇ.ಸಿ. ನಾನು ಹಾಜರುಪಡಿಸಿಲ್ಲ.

3. ನಿಪಿ 12 ಎನಕಬರೆನ್ಸ ಸರ್ಟಿಫಿಕೇಟ್ ದಿನಾಂಕಃ-21-02-2006 ರಿಂದ 07-05-2020 ನೇ ಸಾಲಿನದ್ದು ಇದೆ ಎಂದರೆ ಸರಿ. ಅದರಲ್ಲಿ ವಾದಿ ಅಕ್ಕಮಹಾದೇವಿ ಗಂಡ ಶಿವಯ್ಯ ಹಿರೇಮಠ ಅವರ ಹೆಸರು ಇದೆ ಎಂದರೆ ಸರಿ. ಈಗ ನೋಡಿದ ಆಸ್ತಿ ಉತಾರ ನಿಪಿ 14 ಪ್ರಕಾರ 12-01-2020 ರಂದು ಅಕ್ಕಮಹಾದೇವಿ ಶಿವಯ್ಯ ಹಿರೇಮಠ ಇವರ ಹೆಸರು ಇದೆ ಎಂದರೆ ಸರಿ, ಆದರೆ ನಾನು ಪಡೆದಿದ್ದ ಇಸಿ ಮತ್ತು ಪ್ರಾಪರ್ಟಿ ಎಕ್ಸಾಟ್ರಾಕ್ಟ ಆಸ್ತಿ ಉತಾರದಲ್ಲಿ ಅಕ್ಕಮಹಾದೇವಿ ಹೆಸರು ಇರಲಿಲ್ಲ.

4. 21-02-2006 ರಂದು ನಿಪಿ 1 ರಂತೆ ಅಕ್ಕಮಹಾದೇವಿ ಸದರಿ ಪ್ಲಾಟ್ ನಂ. 41 ಮತ್ತು 44 ನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಖರೀದಿ ಕಾಲಕ್ಕೆ ನಾನು ಯಾವುದೇ ದಾಖಲೆ ಪರಿಶೀಲನೆ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿ ಹೆಸರಿಗೆ ಖರೀದಿ ಪತ್ರ ಆದರೂ ಸಹ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳಿದೆ ಎಂದರೆ ಸರಿಯಲ್ಲ.

5. ಪ್ರತಿವಾದಿ ನಂ. 1 ಮತ್ತು 2 ಮಹಾಂತೇಶ ಮತ್ತು ಅಶೋಕ ತಮ್ಮ ಕುಟುಂಬದ ಆಸ್ತಿಗಳಲ್ಲಿ ಪಾಲುವಾಟ್ನಿ ಮಾಡಿಕೊಂಡ ಪತ್ರವನ್ನು ನಾನು ನೋಡಿರುವುದಿಲ್ಲ. ವಾದಿ ಅಕ್ಕಮಹಾದೇವಿ ಪ್ರತಿವಾದಿ ನಂ.2 ಅಶೋಕ ಇತನಿಗೆ ಯಾವುದೇ ಹಕ್ಕು ಬಿಟ್ಟು ಕೊಟ್ಟ ಪತ್ರ ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ ಮತ್ತು ನನಗೆ ತೋರಿಸಿಲ್ಲ.

6. ಭಾಗ್ಯನಗರ ಪಂಚಾಯತಿಯವರು ವಾದಿ ಅಕ್ಕಮಹಾದೇವಿ ಹೆಸರನ್ನು ಪ್ಲಾಟ್ ನ. 41 ರಿಂದ ತೆಗೆದು ಪ್ರತಿವಾದಿ ನಂ. 2 ರವರ ಹೆಸರನ್ನು ದಿಃ- 25-05-2010 ರಂದು ಕಡಿಮೆ ಮಾಡಿ ನಿಪಿ 30 ರಂತೆ ಹೆಸರು ಅನದಿಕೃತವಾಗಿ ಹೆಸರು ದಾಖಲಿಸಿದರು ಎಂದರೆ ನನಗೆ ಗೊತ್ತಿಲ್ಲ, ನಾನು ನೋಡಿದಾಗ ಅಶೋಕನ ಹೆಸರು ಇತ್ತು. ವಾದಿ ಹೆಸರಿನಲ್ಲಿ ನೊಂದಾಯಿತ ಖರೀದಿ ಪತ್ರ ಇದ್ದರೂ ಸಹ ಅವರ ಹಕ್ಕು ಮುಗಿಸುವ ಉದ್ದೇಶದಿಂದ ನಾನು ಮತ್ತು ಅಶೋಕ ಸೇರಿ ಸುಳ್ಳು ಕ್ರಯ ಪತ್ರ ಮಾಡಿಕೊಂಡೆವು ಎಂದರೆ ಸರಿಯಲ್ಲ. ನಾನು ಪ್ರಮಾಣೀಕೃತ ಖರೀದಿದಾರ ಅಲ್ಲಾ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ಸಾಕ್ಷಿಯು ನುಡಿದಂತೆ ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.
ಸಹಿ/-
**ಹಿರಿಯ ವ್ಯವಹಾರ ನ್ಯಾಯಾಧೀಶರು,**
**ಕೊಪ್ಪಳ.**